ಓ ಎಸ್ ನಂ. 72/2014
ಪಿ.ಡಬ್ಲ್ಯೂ ಃ 2

ದಿನಾಂಕಃ-19.09.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಾದ**
**ಶ್ರೀ. ಎಂ ಎ ರವರಿಂದ**

ವಾದಿಯನ್ನು ನಾನು ನೋಡಿದ್ದೇನೆ, ಅವರು ನನಗೆ ದೊಡ್ಡಮ್ಮನಾಗಬೇಕು. ವಾದಿಯವರು ಈಗ ತೋಟಸಾಗರದಲ್ಲಿ ವಾಸ ಇದ್ದಾರೆ. ವಾದಿಯವರು ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ಮಾಡುತ್ತಾ ಆರೋಗ್ಯದಿಂದ ಇದ್ದಾರೆ ಎಂದರೆ ಸರಿ. ವಾದಿಯವರ ಮಗ ಸಿದ್ಧರಾಜುರವರು ತಿಪಟೂರಿನಲ್ಲಿ ವಾಸ ಇದ್ದಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯವರ ತಂದೆ ನನಗೆ ತಾತನಾಗಬೇಕು, ಅವರನ್ನು ನಾನು ನೋಡಿಲ್ಲ. ವಾದಿಯ ತಂದೆಯವರು ಖರೀದಿಸಿದ ಆಸ್ತಿಗಳನ್ನು ನಾನು ನೋಡಿಲ್ಲ. ವಾದಿ ಈ ದಾವೆಯನ್ನು ಎಷ್ಟು ಜಮೀನುಗಳಿಗೆ ಸಂಬಂಧಿಸಿದಂತೆ ಹೂಡಿರುತ್ತಾರೆ ಮತ್ತು ಅವುಗಳ ಸರ್ವೆ ನಂ., ವಿಸ್ತೀರ್ಣ ಹಾಗೂ ಚಕ್ಕುಬಂದಿ ನನಗೆ ಗೊತ್ತಿಲ್ಲ.

ದಾವಾ ಷಡ್ಯೂಲ್ ಐಟಂ ನಂ. 1ನ್ನು ಪ್ರತಿವಾದಿಯ ಗಂಡ ಖರೀದಿಸಿದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ, ಅದೇ ಪ್ರಕಾರ ದಾವಾ ಷಡ್ಯೂಲ್ ಐಟಂ ನಂ. 6 ಮತ್ತು 7ನ್ನು ಪ್ರತಿವಾದಿಯ ಖರೀದಿಸಿದ ಜಮೀನುಗಳು ಎಂದರೆ ನನಗೆ ಗೊತ್ತಿಲ್ಲ. ದಾವಾ ಷಡ್ಯೂಲ್ ಐಟಂ ನಂ. 1, 6 ಮತ್ತು 7ನ್ನು ಖರೀದಿಸಿದ ದಿನದಿಂದಲೂ ಪ್ರತಿವಾದಿ ಮತ್ತು ಆಕೆಯ ಗಂಡ ಸ್ವಾಧೀನಾನುಭವದಲ್ಲಿ ಇದ್ದು ಅನುಭವಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಷಡ್ಯೂಲ್ ಐಟಂ ನಂ. 1, 6 ಮತ್ತು 7ನ್ನು ಹೊರತುಪಡಿಸಿ ಉಳಿದ ಜಮೀನುಗಳು ವಾದಿ ಮತ್ತು ಪ್ರತಿವಾದಿಯ ತಂದೆಯಾದ ಚಿಕ್ಕಬಸಪ್ಪನವರ

ಸ್ವಯಾರ್ಜಿತವಾದ ಸ್ವತ್ತು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯ ತಂದೆಯಾದ ಚಿಕ್ಕಬಸಪ್ಪನವರು ತಮ್ಮ ಜೀವಿತಾವಧಿಯಲ್ಲಿ ಅವರ ಸ್ವಯಾರ್ಜಿತವಾದ ಜಮೀನುಗಳನ್ನೆಲ್ಲಾ ಪ್ರತಿವಾದಿಯವರಿಗೆ ಮೃತ್ಯು ಪತ್ರದ ಮೂಲಕ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೃತ್ಯು ಪತ್ರದ ಆಧಾರದ ಮೇಲೆ ಬಂದ ಜಮೀನುಗಳೆಲ್ಲಾ ಪ್ರತಿವಾದಿಯ ಹೆಸರಿನಲ್ಲಿ ಖಾತೆ-ಪಹಣಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲೆಲ್ಲಾ ಪ್ರತಿವಾದಿ ಮಾತ್ರ ಸ್ವಾಧೀನಾನುಭವದಲ್ಲಿ ಇದ್ದು ಅದನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ವಾದಿ ಮತ್ತು ಪ್ರತಿವಾದಿ ಇಬ್ಬರು ಒಟ್ಟಿಗೆ ಒಂದೇ ಮನೆಯಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಒಟ್ಟಿಗೆ ಒಂದೇ ಮನೆಯಲ್ಲಿ ಇದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ಮಗನ ಮಾತುಕೇಳಿ ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಅವರಿಗೆ ಸಹಾಯವಾಗಲೆಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗೆ ಯಾವುದೇ ಹಕ್ಕು, ಅಧಿಕಾರ ಮತ್ತು ಪಾಲು ಇಲ್ಲದಿದ್ದರೂ ವಾದಿಗೆ ಸಹಾಯವಾಗಲೆಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ವಾದಿಗೆ ಆಕೆಯ ತಂದೆ ತಮ್ಮ ಜೀವಿತಾವಧಿಯಲ್ಲಿ ದುಡ್ಡು ಮತ್ತು ಒಡವೆಯನ್ನು ಆಕೆಯ ಭಾಗಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈಗ ವಾದಿ ಮತ್ತು ಆಕೆಯ ಮಗ ಹಾಗೂ ನಾವುಗಳೆಲ್ಲಾ ಶಾಮಿಲ್ ಆಗಿ ಪ್ರತಿವಾದಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಷಡ್ಯೂಲ್ ಐಟಂ ನಂ. 1, 6 ಮತ್ತು 7ರಲ್ಲಿ ಪ್ರತಿವಾದಿ ನೀಲಗಿರಿ ಮರಗಳನ್ನು ಬೆಳೆಸಿರುತ್ತಾರೆ ಎಂದರೆ ಸರಿ. ಸದರಿ

ಜಮೀನುಗಳಲ್ಲಿರುವ ನೀಲಗಿರಿ ಮರಗಳನ್ನು ನಾವು ಕಡಿದು ತೆಗೆದುಕೊಂಡು ಹೋಗಿದ್ದರಿಂದ ನಮ್ಮಗಳ ವಿರುದ್ಧ ಗುಬ್ಬಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ನಮ್ಮ ಜಮೀನಿನಲ್ಲಿ ಮರಗಳನ್ನು ಕಡಿದಿದ್ದೇವು ಎಂದು ನುಡಿಯುತ್ತಾರೆ. ನಮ್ಮ ಜಮೀನಿನ ಸರ್ವೆ ನಂ. 85/2. ನೀಲಗಿರಿ ಮರಗಳ ವಿಚಾರವಾಗಿ ಪ್ರತಿವಾದಿ ನಮ್ಮಗಳ ವಿರುದ್ಧ ಪೊಲೀಸ್ ದೂರು ನೀಡಿದ್ದುದರ ದ್ವೇಷ ಇಟ್ಟುಕೊಂಡು ಈ ಪ್ರಕರಣದಲ್ಲಿ ನಾವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಬ್ಬಿ